ಬಿ.ಎಲ್. ವೇಣು



'ಅಂಬಾ' ಎಂಬ ಕೂಗು ಮೊದಮೊದಲು ಮಗುವಿನ ಅಳುವಿನಂತೆ ಇಂಪಾಗಿ ಅಂತಃಕರಣ ಕಲಕಿ ಅವುಗಳು ನಿಂತಿರುವತ್ತಲೇ ಹೋಗಿ ಮೈದಡವುದೇನು, ಗೊದಲನ್ನು ನೇವರಿಸುವುದೇನು, ಬೆನ್ನು ಚಪ್ಪರಿಸುವುದೇನು, ಉಣ್ಣೆ ಕಂಡರೆ ಕೋಪದಿಂದ ಕಿತ್ತು ಬಿಸುಟುವುದು ಹಣೆಮುಟ್ಟಿ ನಮಿಸುವಂತಹ ಕ್ರಿಯೆಗಳಲ್ಲಿ ಎಲ್ಲರದ್ದೂ ಒಂಥರಾ ಪೈಪೋಟಿಯೆ. ಸೆಗಣಿ ಗಂಜಲ ವಾಸನೆಯಂತೂ 'ಫಾಗ್'ನಷ್ಟು ಹಿತ. 'ಸೆಗಣಿಗೆ ಮೆಡಿಸಿನಲ್ ವಾಲ್ಯೂ ಇದೆ ಕಣ್ರಿ. ಗಂಜಲ ಅಲ್ಲದು ಗೋಮೂತ್ರ. ಗಂಗಾಜಲಕ್ಕೆ ಸಮಾನ. ಪಂಚಗವ್ಯದಲ್ಲಿ ಇದೂ ಬರ್ತದೆ. ಆರೋಗ್ಯಕ್ಕೆ ಅಗದಿ ಒಳ್ಳೇದು. ಇವುಗಳನ್ನು ಸೇರಿಸಿ ಗುಡ್ಡೆ ಹಾಕಿದರೆ ಅದೇ ಕಣ್ರಿ ಸಾವಯವ ಗೊಬ್ಬರ. ದನಗಳಿಂದಾಗುವ ಉಪಯೋಗ ಮನುಷ್ಯನಿಂದ ಅಕ್ಕಾತೇನು? ಸತ್ತ ಮೇಲೆ ಮನುಷ್ಯಂಗೆ ನೊ ವಾಲ್ಯು. ಕಸವನ್ನಾದ್ರೂ ಮೂರು ದಿನ ಮೂಲೇಲಿ ಇಟ್ಕೊಂಡಾರು ಸತ್ತಬಾಡಿ ವಿಲೇವಾರಿ ಆಗ್ಲಿಕ್ಕೆ ಬೇಕಾಗ್ತದ ನೋಡ್ರಿ. ಆದರೆ ದನ ಸತ್ತರೆ ಕುಯ್ಕೊಂಡು ಉಣ್ತಾರೆ. ಚರ್ಮ ಸುಲಿದು ಹದ ಮಾಡಿದ್ರೆ ವಾದ್ಯಗಳಾಗ್ತವೆ. ವಿಚಾರ ಮಾಡೇ ಹೇಳವರೆ ದನಗಳು ಅಂದ್ರ ದೇವರ ಸಮಾನವಂತ. ಉತ್ತಿ, ಬಂಡಿ ಎಳೆದು ಬೇಸಾಯ ಮಾಡೋ ಬಸವಣ್ಣ; ಇನ್ನು ಆಕುಳ ನಮಗೆ ಹಾಲು ಕೊಡೋ ಎರಡನೆ ಮಾತಾ. ಈಕಿ ಮೂವತ್ತು ಮೂರು ಕೋಟಿ ದೇವತೆಗಳಿಗೆ ಒಂಥರಾ ಲಾಡ್ಜ್ ಇದ್ದಂಗ. ಸೇವಾ